

ಅರಿವು ಹಾಗೂ ಚಾರಣಸುಖದ ಹಾದಿಯಲ್ಲಿ...



ಸಿದ್ಧಪ್ಪನ ಗದ್ದುಗೆಗೆ ಹೋಗುವಾಗ ತೊಟ್ಟಿಲು ಕಂದ ಹೂಹಗುರ.

ಇಲ್ಲಿನ ಎಲ್ಲ ಗಿಡಮರಗಳೂ ಮಾಡಿಕೊಂಡಿರುವ ಹೊಂದಾಣಿಕೆ ಸಾಮಾನ್ಯವಾದದ್ದಲ್ಲ!

ನಾವು ಸಿದ್ಧರಬೆಟ್ಟದ ಚಾರಣ ಆರಂಭಿಸಿದಾಗ ನಮ್ಮ ಜೊತೆಗೆ ಪುಟ್ಟ ಕುಟುಂಬವೊಂದು ಸೇರಿಕೊಂಡಿತು. ಪುಟ್ಟ ಕುಟುಂಬ ಯಾಕೆಂದರೆ, ಅದರಲ್ಲಿ ಐದು ತಿಂಗಳ ಹೆಣ್ಣು ಕೂಸು ಕೂಡ ಇತ್ತು! ಕೂಸನ್ನು ಬಿದಿರಿನ ತೊಟ್ಟಿಲಲ್ಲಿ ಮಲಗಿಸಿ ಅದಕ್ಕೆ ಕೊಡೆಯೊಂದನ್ನು ಮರೆಮಾಡಿ ತೊಟ್ಟಿಲನ್ನು ಹೊತ್ತ ಅದರ ಅಜ್ಜಿ ಬೆಟ್ಟ ಏರಲಾರಂಭಿಸಿತು. ಅಮ್ಮ ಅಪ್ಪ ಕೂಸಿನ ಕಡೆಗೇ ಕಣ್ಣಾಗಿ ನಡೆಯಹತ್ತಿದರು. ಅಲ್ಲಲ್ಲಿ ತೊಟ್ಟಿಲನ್ನು ಇಳುವುತ್ತ, ಕೂಸನ್ನು ಮಾತನಾಡಿಸುತ್ತ ಕುಟುಂಬ ಬೆಟ್ಟ ಏರಲಾರಂಭಿಸಿತು. ಬಿಸಿಲಿನ ಝಳ ತಾಳುವಂತಿತ್ತು. ಆಸುಪಾಸಿನ ಹಳ್ಳಿಗಳ ಕುಟುಂಬಗಳಲ್ಲಿ ಮಗುವಾದರೆ ವರ್ಷ ತುಂಬುವುದರೊಳಗೆ ಸಿದ್ಧಪ್ಪನ ಆಶೀರ್ವಾದ ಪಡೆಯಲು ಹೀಗೆ ಕೂಸನ್ನು ಹೊತ್ತೊಯ್ಯುತ್ತಾರೆ. ನಾನು ಆರು ತಿಂಗಳ ಕೂಸಾಗಿದ್ದಾಗ ಅವ್ವ ನನ್ನನ್ನೂ ಹೀಗೆ ಹೊತ್ತು ತಂದಿತ್ತಂತೆ! ಯಾರೂ ಆಯಾಸವನ್ನು ಅನುಭವಿಸುವುದಿಲ್ಲ! ಸಿದ್ಧಪ್ಪ ನಮ್ಮನ್ನು ಕರೆಸಿಕೊಳ್ಳುತ್ತಾನೆ ಎಂದೇ ನಂಬುತ್ತಾರೆ.

ಸುಮಾರು ಒಂದು ಗಂಟೆಯ ಚಾರಣದ ನಂತರ ಸಿದ್ಧಪ್ಪನ ಗದ್ದುಗೆ ಸಿಗುತ್ತದೆ. ಗವಿಯನ್ನೇ ಸಣ್ಣಪುಟ್ಟ ಗೋಡೆಗಳೊಂದಿಗೆ ಗದ್ದುಗೆಯನ್ನಾಗಿಸಿದ್ದಾರೆ. ಗವಿಯ ಒಳಗೆ ತಣ್ಣಗಿರುತ್ತದೆ. ಬಂದವರು ಪ್ರಸಾದ ಮಾಡಿಕೊಳ್ಳಲು ಮತ್ತು ಉಳಿದುಕೊಳ್ಳಲು ಅನುಕೂಲವಾಗುವಂತೆ ಒಂದೆರಡು ಅತ್ಯಂತ ಹಳೆಯ ಕಟ್ಟಡಗಳಿವೆ. ನೀರಿನ ಕೊರತೆ ಇಲ್ಲ. ಸರ್ಕಾರ ಬೆಟ್ಟದ ಪಕ್ಕದಲ್ಲಿರುವ ಕೆರೆಗಳಿಂದ ನೀರನ್ನು ಒದಗಿಸಿಕೊಟ್ಟಿದೆ. ಚಾರಣದ ಅವಧಿ ಸುಮಾರು ಮೂರು ಗಂಟೆಗಳು. ಇನ್ನೂ ಹೆಚ್ಚಿನ ಚಾರಣ ಬೇಕೆಂದರೆ ಸಿದ್ಧಪ್ಪನ ಗದ್ದುಗೆಯಿಂದ ನಾಟ್ಯಧಾರೆ ಎನ್ನುವ ಇನ್ನೊಂದು ಕಣಿವೆಗೆ ಹೋಗಿಬರಬಹುದು. ಅದಕ್ಕೆ ಮತ್ತೆ ಎರಡು ಗಂಟೆಯ ಕಾಲ ಬೇಕಾಗುತ್ತದೆ. ಐದಾರು ಜನರ ಗುಂಪು ಇದ್ದರೆ ಕ್ಷೇಮ. ಇದು ಚಿರತೆಗಳು, ಕರಡಿಗಳು ಇರುವ ಬಯಲು ಸೀಮೆಯ ಗುಡ್ಡಗಾಡು. ಬೆಳಗಿನ ಹೊತ್ತು ಮತ್ತು ಸಂಜೆಯ ಸಮಯ ಚಾರಣಕ್ಕೆ ಸೂಕ್ತವಲ್ಲ. ಈ ಚಾರಣದ ಜೊತೆಗೆ ಜೇನುಕಲ್ಲು ಸಿದ್ಧರಬೆಟ್ಟಕ್ಕೂ ಚಾರಣ ಮಾಡಿ ಹಿಂದಿರುಗಬಹುದು. ಅದು ಅರಸೀಕೆರೆಯಿಂದ ಐದು ಕಿಲೋಮೀಟರು ದೂರದಲ್ಲಿರುವ ಮತ್ತೊಂದು ಸುಂದರ ಸಿದ್ಧರ ಗದ್ದುಗೆ. ಜೇನುಕಲ್ಲು ಬೆಟ್ಟಕ್ಕೆ ಸುವ್ಯವಸ್ಥಿತ ಮೆಟ್ಟಿಲು, ಮೇಲುಹೊದಿಕೆ ಇರುವ ದಾರಿ ಇದೆ.

ಹುಣ್ಣಿಮೆಯ ರಾತ್ರಿ ಎರಡೂ ಬೆಟ್ಟಗಳಲ್ಲಿ ತತ್ವ ಹಾಡುತ್ತಾರೆ. ಹಿರೇಕಲ್ಲು ಬೆಟ್ಟದಲ್ಲಿ ಮೊದಲಿನ ಹಾಗೆ ಜಾಸ್ತಿ ಸಾಧಕರು ಈಗ ಇಲ್ಲ. ಕೆಲವರು ಬಂದು ಕಟ್ಟಳೆ ನಡೆಸುತ್ತಾರೆ ಎಂದು ಗೊತ್ತಾಯಿತು. ಬಂದ ಭಕ್ತರು ತಾವೇ ಅಡುಗೆ ಮಾಡಿ ಅಲ್ಲಿದ್ದವರಿಗೆ ಬಡಿಸುತ್ತಾರೆ. ಬಿಸಿ ಹೋಳಿಗೆ ತುಪ್ಪ ಅಥವಾ ಬಿಸಿಮುದ್ದೆ ಸೊಪ್ಪಿನ ಸಾರು ಇಲ್ಲಿಯ ವಿಶೇಷ ಪ್ರಸಾದ! ನಮಗೂ ಬಿಸಿ ಮುದ್ದೆ ಸೊಪ್ಪಿನ ಸಾರು, ಕೋಸಂಬರಿಯ ನೆಂಚಿಗೆಯ ಪ್ರಸಾದ ದೊರಕಿತು. ಬಂಡೆ ಮೇಲೆ ಎಲ್ಲರೂ ಯಾವುದೇ ಭೇದಭಾವವಿಲ್ಲದೆ ಸಾಲಾಗಿ ಕೂತು ತೃಪ್ತಿಯಾಗಿ ಉಂಡೆವು. ಸ್ವಲ್ಪ ದೂರದ ಜೇನುಕಲ್ಲು ಸಿದ್ಧರ ಬೆಟ್ಟದ ವಿಶೇಷವೆಂದರೆ, ಬೆಟ್ಟದ ಮೇಲೆ ಅಲ್ಲೇ ಕಲಸಿ ನೀಡುವ ತಂಬಿಟ್ಟು ಮತ್ತು ಕೋಸಂಬರಿ. ಬಂದ ಎಲ್ಲರಿಗೂ ನೀಡಿ ಎಲ್ಲವನ್ನೂ ಅಲ್ಲೇ ಖಾಲಿ ಮಾಡಿ ಹೋಗುವುದೊಂದು ಅನನ್ಯ ಅನುಭವ. ಏನನ್ನೂ ಹೊತ್ತುಕೊಂಡು ಹೋಗುವುದು ಸಿದ್ಧರ ಕ್ರಮವಲ್ಲ. ಮನಸ್ಸನ್ನೂ ಹಾಗೆ ಬಯಲನ್ನಾಗಿಸಿಟ್ಟುಕೊಳ್ಳುವುದೇ ಸಿದ್ಧ ಸಾಧನೆಯ ಗುರಿ.

ಚಾರಣಕ್ಕೆಂದು ಬರುವವರು ಪ್ಲಾಸ್ಟಿಕ್ ತರಕೂಡದು. ಇದು ಯಾರೂ ವಿಧಿಸಿರುವ ಕಟ್ಟಳೆಯಲ್ಲ. ನಾವೇ ಪ್ರಾಮಾಣಿಕತೆಯಿಂದ ಪಾಲಿಸಲೇಬೇಕಾದ ನಿಯಮ. ನಮ್ಮ ಬಯಲುಸೀಮೆಯ ಗುಡ್ಡ ಮತ್ತು ಕಾಡುಗಳು ನಗರದವರ ಕಸದ ಗುಡ್ಡೆಗಳಲ್ಲ. ಇದನ್ನು ಗೌರವಿಸದವರು ಬರದಿರುವುದು ಲೇಸು. ಇಲ್ಲಿ ಕೆಳಗಾಗಲೀ ಬೆಟ್ಟದ ಮೇಲಾಗಲೀ ಯಾವುದೇ ಅಂಗಡಿಗಳಿಲ್ಲ. ಸಾಕಷ್ಟು ನೀರು ಮತ್ತು ಆಹಾರ ತೆಗೆದುಕೊಂಡು ಚಾರಣ ಮಾಡಬೇಕು. ಕಾಡಿನ ಸೂಕ್ಷ್ಮ ಪರಿಸರವನ್ನು ಕದಡುವ ಯಾವುದೇ ರೀತಿಯ ಹಾನಿ ಮಾಡದಿರುವುದು ನಮಗೆ ನಾವೇ ಮಾಡಿಕೊಳ್ಳುವ ಒಳಿತಿನ ಕೆಲಸವೆಂಬ ವಿವೇಕ ಎಲ್ಲರಿಗೆ ಇರಬೇಕು.

ಅರಸೀಕೆರೆಯಿಂದ ಮುಂದಕ್ಕೆ ಹೋಗಲು ಸ್ವಂತ ವಾಹನ ಇದ್ದರೆ ಅನುಕೂಲ. ಬಸ್ಸಿನಲ್ಲಿ ಹೋಗಿ ಇಳಿದು ಚಾರಣ ಆರಂಭಿಸಬಹುದು. ಮೂರು ಕಿಲೋಮೀಟರು ಹೆಚ್ಚುವರಿ ಚಾರಣ ಮಾಡಿದಂತಾಗುತ್ತದೆ. ಬೆಟ್ಟದ ಮೇಲೆ ಸಿದ್ಧಪ್ಪನ ಜೊತೆಗೆ ಸ್ವಲ್ಪ ಹೊತ್ತು ತಣ್ಣಗೆ ಕುಳಿತು ಆಯಾಸವನ್ನು ಕಳೆದುಕೊಂಡು ನಿರಾಳವಾಗಿ ಬನ್ನಿ.

ಪ್ರತಿಕ್ರಿಯಿಸಿ: feedback@sudha.co.in